| | | |
|---|---|---|
| **10** ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ | | |
| ಸಿಸಿ ನಂ.**58759/2022** | | |
| | ಪ್ರಾ.ಸಾ.2 | ಚಾ.ಸಾ.6 |
| ಹೆಸರು | ಕಲಾವತಿ | |
| ಗಂಡನ ಹೆಸರು | ಸಾಲೋಮನ್ | |
| ವಯಸ್ಸು | 51 ವರ್ಷ | |
| ಕೆಲಸ | ಹೌಸ್ ಕೀಪಿಂಗ್ | |
| ವಿಳಾಸ | ಹಲಸೂರು, ಬೆಂಗಳೂರು | |
| ದಿಃ 09.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾ.ಸಾ,1 ರವರು ನನ್ನ ಮಗಳು. ಚಾ.ಸಾ.5 ರವರು ನನ್ನ ಗಂಡ. ನನಗೆ ಚಾ.ಸಾ.2 ರಿಂದ 4 ರವರ ಪರಿಚಯವಿರುತ್ತದೆ. 1 ನೇ ಆರೋಪಿ ನನ್ನ ಅಳಿಯ ಹಾಗೂ ಉಳಿದ ಆರೋಪಿತರು ನಮ್ಮ ಬೀಗರು. ಚಾ.ಸಾ.1 ಮತ್ತು 1 ನೇ ಆರೋಪಿಯ ಮದುವೆ ದಿಃ 30.04.2018 ರಂದು ನಮ್ಮ ಊರಿನಲ್ಲಿ ಮದುವೆಯಾಗಿರುತ್ತದೆ. 1 ನೇ ಆರೋಪಿಯು ನನ್ನ ಚಿಕ್ಕಪ್ಪನ ಮಗನಾಗಿದ್ದು, ನಾವೆಲ್ಲರೂ ಮಾತನಾಡಿ ಮದುವೆ ಮಾಡಿಸಿರುತ್ತೇವೆ. ಮದುವೆಯಾದ ನಂತರ ಒಂದು ವಾರ ಚಾ.ಸಾ.1 ಮತ್ತು 1 ನೇ ಆರೋಪಿಯನ್ನು ನಮ್ಮ ಮನೆಗೆ ಕರೆಸಿಕೊಂಡು ಶಾಸ್ತ್ರವನ್ನು ಮುಗಿಸಿ ನಂತರ ಅವರನ್ನು ಕುಟಗುಂಡಪಾಳ್ಯಕ್ಕೆ ಚಾ.ಸಾ,1 ರವರ ಅತ್ತೆ ಮಾವನ ಮನೆಗೆ ಕಳುಹಿಸಿರುತ್ತೇವೆ. ಅಲ್ಲಿ 1 ನೇ ಆರೋಪಿಯ ತಂದೆ ತಾಯಿ, ಅಜ್ಜಿ ಮತ್ತು ಅಣ್ಣ - ಅತ್ತಿಗೆ ವಾಸವಾಗಿದ್ದರು. 1 ನೇ ಆರೋಪಿ ಹೈದರಾಬಾದ್ ನಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಚಾ.ಸಾ.1 ರವರನ್ನು ಊರಿನಲ್ಲೇ ಬಿಟ್ಟು ಹೋಗಿರುತ್ತಾರೆ. ನಾವು ಈ ಬಗ್ಗೆ ಕೇಳಿದಾಗ ಮನೆ ಮಾಡಬೇಕು ಎಂದು ಹೇಳಿರುತ್ತಾರೆ. ಒಂದು ತಿಂಗಳ ನಂತರ ನನ್ನ ಮಗಳನ್ನು ಹೈದರಾಬಾದ್ ಗೆ ಕರೆಸಿಕೊಂಡಿದ್ದು, ಅಲ್ಲಿ ನರ್ಸ್ ಆಗಿ ಚಾ.ಸಾ.1 ರವರು ಒಂದು ಆಸ್ಪತ್ರೆಯಲ್ಲಿ ಕೆಲಸ

ಮಾಡುತ್ತಿದ್ದರು. ಅವರಿಬ್ಬರೂ ಸುಮಾರು 4-5 ತಿಂಗಳು ಚೆನ್ನಾಗಿ ಇರುತ್ತಾರೆ. ಚಾ.ಸಾ,1 ರವರು ಗರ್ಭಿಣಿಯಾಗಿದ್ದು, ರಕ್ತಸ್ರಾವವಾದ ಕಾರಣ ಹೈದರಾಬಾದ್ ನಲ್ಲಿರುವ ನನ್ನ ಚಿಕ್ಕಮ್ಮನಿಗೆ ಕರೆ ಮಾಡಿ ಈ ವಿಚಾರವನ್ನು ತಿಳಿಸಿ ಅವಳಿಗೆ ಆಗುತ್ತಿಲ್ಲವೆಂದು ಹೇಳಿದ ಕಾರಣ ನನ್ನ ಚಿಕ್ಕಮ್ಮ ನನಗೆ ಕರೆ ಮಾಡಿ ವಿಚಾರವನ್ನು ತಿಳಿಸಿರುತ್ತಾರೆ. ನಾವು ಕೂಡಲೇ ಹೈದರಾಬಾದ್ ಗೆ ಹೋಗಿದ್ದು, ಅಲ್ಲಿ ಹೋಗಿ ವಿಚಾರಿಸಿದಾಗ ಚಾ.ಸಾ.1 ರವರು ಗರ್ಭಿಣಿಯಾದ ನಂತರ ಅವರನ್ನು ಒಂದು ದಿವಸವೂ 1 ನೇ ಆರೋಪಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ ಹಾಗೂ ಯಾವುದೇ ಔಷಧಿಯನ್ನು ತಂದು ಕೊಟ್ಟಿರುವುದಿಲ್ಲ ಎಂದು ತಿಳಿದುಬಂತು. ನಾವೇ ಚಾ.ಸಾ.1 ರವರನ್ನು ಆಸ್ಪತ್ರೆಯಲ್ಲಿ ದಾಖಲು ಮಾಡಿದಾಗ ವೈದ್ಯರು ಚಾ.ಸಾ.1 ರವರಿಗೆ ಬೆಡ್ ರೆಸ್ಟ್ ಕೊಡಬೇಕೆಂದು ಹೇಳಿರುತ್ತಾರೆ. ಆದ್ದರಿಂದ ಚಾ.ಸಾ.1 ರವರನ್ನು ಅಲ್ಲಿ ಯಾರೂ ನೋಡಿಕೊಳ್ಳಲು ಇಲ್ಲವೆಂದು ನಾವು ಕರೆದುಕೊಂಡು ಹೋಗುತ್ತೇವೆ ಎಂದು 1 ನೇ ಆರೋಪಿಗೆ ಹೇಳಿದಾಗ ಅವರು ಒಪ್ಪಿರುತ್ತಾರೆ. 1 ನೇ ಆರೋಪಿ ಅವರ ಅತ್ತಿಗೆಯ ಮಾತು ಕೇಳಿ ಚಾ.ಸಾ.1 ರವರಿಗೆ ಚಿಕಿತ್ಸೆ ಕೊಡಿಸುತ್ತಿರಲಿಲ್ಲವೆಂದು ತಿಳಿದುಬಂತು. ನಾವು ಚಾ.ಸಾ.1 ರವರನ್ನು ಬೆಂಗಳೂರಿನ ಬ್ಯಾಪ್ಟಿಸ್ಟ್ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿದಾಗ ರಕ್ತಸ್ರಾವ ಹೆಚ್ಚಾಗಿದ್ದ ಕಾರಣ ಮಗುವನ್ನು ಉಳಿಸಿಕೊಳ್ಳಲು ಆಗುವುದಿಲ್ಲವೆಂದು ಹೇಳಿದ್ದು, ವೈದ್ಯರ ಸೂಚನೆಯಂತೆ ಗರ್ಭಪಾತ ಮಾಡಿಸಿರುತ್ತೇವೆ. ಆ ಸಮಯದಲ್ಲಿ 1 ನೇ ಆರೋಪಿಯೂ ಅಲ್ಲಿ ಇದ್ದರು.

ಚಾ.ಸಾ.1 ರವರಿಗೆ ವಿಶ್ರಾಂತಿ ಬೇಕು ಎಂದು ನಾವು ಬೆಂಗಳೂರಿನಲ್ಲಿಯೇ ಎರಡು ತಿಂಗಳು ಇರಿಸಿಕೊಂಡಿರುತ್ತೇವೆ. 1 ನೇ ಆರೋಪಿಯನ್ನು ಮೊದಲನೇ ಕ್ರಿಸ್‌ಮಸ್ ಹಬ್ಬಕ್ಕೆಂದು ನಾವು ಕರೆದಿರುತ್ತೇವೆ. ಕ್ರಿಸ್‌ಮಸ್ ಹಬ್ಬದ ಸ್ವಲ್ಪ ದಿನಗಳ ಮುಂಚೆ 1 ನೇ ಆರೋಪಿಯು ಚಾ.ಸಾ.1 ರವರಿಗೆ ಕರೆ ಮಾಡಿ 1 ನೇ ಆರೋಪಿಯು ತಮ್ಮ ಅತ್ತಿಗೆ, 4 ನೇ ಆರೋಪಿಯೊಂದಿಗೆ

ಅಕ್ರಮ ಸಂಬಂಧ ಹೊಂದಿರುವುದಾಗಿ ತಿಳಿಸಿದರು. ಈ ವಿಚಾರ ತಿಳಿದು ಚಾ.ಸಾ.1 ರವರು ಬಿದ್ದು ಹೋಗಿದ್ದು ಎರಡು ದಿನ ಆಸ್ಪತ್ರೆಯಲ್ಲಿ ಕೂಡ ನಾವು ದಾಖಲು ಮಾಡಿದ್ದೆವು. ಆ ಸಂದರ್ಭದಲ್ಲಿ 1 ನೇ ಆರೋಪಿ ಹೇಳಿದ ವಿಚಾರವನ್ನು ನಮಗೆ ತಿಳಿಸಿರಲಿಲ್ಲ. 1 ನೇ ಆರೋಪಿ ಹಬ್ಬಕ್ಕೆ ಬಂದಿದ್ದು, ಹೊಸ ವರ್ಷದ ತನಕ ಇರಲು ಹೇಳಿದರೂ ಅವರು ಇರಲಿಲ್ಲ. ಚಾ.ಸಾ.1 ರವರು 1 ನೇ ಆರೋಪಿಯೊಂದಿಗೆ ಊರಿಗೆ ಹೋಗಿರುತ್ತಾರೆ. ಊರಿಂದ ಹೈದರಾಬಾದ್ ಗೆ ಕರೆದುಕೊಂಡು ಹೋಗಿರುತ್ತಾರೆ.

ಹೈದರಾಬಾದ್ ನಲ್ಲಿದ್ದಾಗ 1 ನೇ ಆರೋಪಿಯು ಅವರ ಅತ್ತಿಗೆ ಮಾತು ಕೇಳಿ ಚಾ.ಸಾ.1 ರವರಿಗೆ ಕುಡಿದು ಹೊಡೆಯುವುದು, ಬೈಯ್ಯುವುದು ಮಾಡುತ್ತಿದ್ದರು. ನಾವು ಮದುವೆಯಲ್ಲಿ ಕೊಟ್ಟ ಒಡವೆಗಳನ್ನು ಅಡ ಇಟ್ಟಿರುತ್ತಾರೆ. ನನ್ನ ಮಗಳು ಬಿಎಸ್ಸಿ ಓದಿದ್ದು ಅವಳ ಪ್ರಮಾಣಪತ್ರಗಳನ್ನು ತೆಗೆದುಕೊಂಡು ಬರಲು ಹಾಗೂ ಅದನ್ನು ಅಡವಿಟ್ಟು ಹಣ ಪಡೆಯಲು ಒತ್ತಾಯಿಸಿರುತ್ತಾರೆ. ಚಾ.ಸಾ.1 ರವರಿಗೆ ಮನೆಯಿಂದ ಹೆಚ್ಚಿನ ಹಣ ಮತ್ತು ಒಡವೆಗಳನ್ನು ತೆಗೆದುಕೊಂಡು ಬರಲು 1 ನೇ ಆರೋಪಿ ಒತ್ತಾಯಿಸಿರುತ್ತಾರೆ. ಈ ವಿಚಾರವನ್ನು ಚಾ.ಸಾ,1 ರವರು ನಮಗೆ ಆ ಸಂದರ್ಭದಲ್ಲಿ ತಿಳಿಸಿರಲಿಲ್ಲ. ಏಪ್ರಿಲ್ ತಿಂಗಳಿನಲ್ಲಿ ಚಾ.ಸಾ.1 ರವರ ಅತ್ತಿಗೆ ಒಬ್ಬರೇ 1 ನೇ ಆರೋಪಿಯ ಮನೆಗೆ ಬಂದಿರುತ್ತಾರೆ ಎಂದು ನನ್ನ ಚಿಕ್ಕಮ್ಮ ನನಗೆ ತಿಳಿಸಿರುತ್ತಾರೆ. ಚಾ.ಸಾ.1 ರವರ ಮದುವೆ ಮಾಡಿ ಶಾಸ್ತ್ರಕ್ಕೆ ಎಂದು ಕರೆದುಕೊಂಡು ಬಂದಾಗ 1 ನೇ ಆರೋಪಿಯ ಅತ್ತಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಪಟ್ಟಿರುತ್ತಾರೆ ಎಂದು ಊರಿನವರಿಂದ ತಿಳಿದುಬಂದಿತ್ತು. ಈ ಅನುಮಾನದಿಂದ ನಾನು ಯಾರಿಗೂ ಹೇಳದೇ ಹೈದರಾಬಾದ್ ಗೆ ಹೋಗಿ ನನ್ನ ಚಿಕ್ಕಮ್ಮನನ್ನು ಕರೆದುಕೊಂಡು ಚಾ.ಸಾ.1 ಮತ್ತು 1 ನೇ ಆರೋಪಿಯ ಮನೆ ಬಳಿ ಹೋಗಿರುತ್ತೇನೆ. ಚಾ.ಸಾ.1 ರವರು ಆ ಸಂದರ್ಭದಲ್ಲಿ ಕೆಲಸಕ್ಕೆ ಹೋಗಿದ್ದರು. ನಾವು ಮನೆಗೆ ಹೋಗಿ ನೋಡಿದಾಗ 1 ನೇ ಆರೋಪಿಯು ಮಂಚದ ಮೇಲೆ

ಕುಳಿತುಕೊಂಡು ಅವರ ಅತ್ತಿಗೆ 4 ನೇ ಆರೋಪಿಯು ನೆಲದ ಮೇಲೆ ಕುಳಿತುಕೊಂಡು 1 ನೇ ಆರೋಪಿಯು 4 ನೇ ಆರೋಪಿಗೆ ಊಟ ಮಾಡಿಸುತ್ತಿದ್ದುದನ್ನು ನೋಡಿದೆವು. ನನಗೆ ಗಾಬರಿ ಮತ್ತು ದಿಗ್ಭ್ರಮೆಯಾಗಿ ಏನು ಮಾಡಬೇಕೆಂದು ತೋಚದೇ ಅಲ್ಲೇ ಹೊರಗೆ ಕುಳಿತುಬಿಟ್ಟೆನು. ನನ್ನ ಮಗಳನ್ನು ಮನೆಗೆ ಬರಲು ಹೇಳಿದ್ದು, ಆನಂತರ 1 ಮತ್ತು 4 ನೇ ಆರೋಪಿತರ ಬಳಿ ಅವರು ಏನು ಮಾಡುತ್ತಿದ್ದಾರೆ ಎಂದು ಕೇಳಿ ಜಗಳ ಮಾಡಿರುತ್ತೇವೆ. ಗಂಡನೊಂದಿಗೆ ಬರಬೇಕಾಗಿತ್ತು ಎಂದು 4 ನೇ ಆರೋಪಿಗೆ ಹೇಳಿದಾಗ ನನ್ನ ಇಷ್ಟ, ನಾನು ಇವರೊಂದಿಗೆ ಇರುತ್ತೇನೆ ಎಂದು 1 ನೇ ಆರೋಪಿಯನ್ನು ತೋರಿಸಿ ಹೇಳಿರುತ್ತಾರೆ. ನನಗೆ ತಲೆ ಸುತ್ತು ಬಂದಂತೆ ಆದ ಕಾರಣ ನನ್ನ ಚಿಕ್ಕಮ್ಮ ನನ್ನನ್ನು ಅದೇ ದಿವಸ ರಾತ್ರಿ ಬೆಂಗಳೂರಿನ ಬಸ್ಸಿಗೆ ಹತ್ತಿಸಿರುತ್ತಾರೆ. ನಾನು ದಾರಿ ಮಧ್ಯೆ ಇದ್ದಾಗ ನನ್ನ ಚಿಕ್ಕಪ್ಪ ಕರೆ ಮಾಡಿ ತಿಳಿಸಿದ್ದೇನೆಂದರೆ 1 ನೇ ಆರೋಪಿ ಚಾ.ಸಾ,1 ರವರನ್ನು ಅಲ್ಲೇ ಬಿಟ್ಟು 4 ನೇ ಆರೋಪಿಯನ್ನು ಕರೆದುಕೊಂಡು ಕನ್ನಗಿರಿಗೆ ಹೋಗಿರುವುದಾಗಿ ಹಾಗೂ ಚಾ.ಸಾ.1 ರವರು ಎಲ್ಲಿಯಾದರೂ ಹೋಗಲಿ, ಏನೂ ಬೇಕಾದರೂ ಮಾಡಲಿ ಎಂದು ನನ್ನ ಚಿಕ್ಕಪ್ಪನಿಗೆ 1 ನೇ ಆರೋಪಿ ಫೋನ್ ಮಾಡಿ ತಿಳಿಸಿರುತ್ತಾರೆ. ನನ್ನ ಚಿಕ್ಕಪ್ಪ ಚಿಕ್ಕಮ್ಮ ಚಾ.ಸಾ.1 ರವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅಲ್ಲಿಂದ ಕುಟಗುಂಡನಹಳ್ಳಿಗೆ ಕರೆದುಕೊಂಡು ಹೋಗಿ ಬಿಟ್ಟಿರುತ್ತಾರೆ.

1 ನೇ ಆರೋಪಿಯ ತಂದೆ ತಾಯಿ ಏನು ಹೇಳಿರುತ್ತಾರೋ ಗೊತ್ತಿಲ್ಲ, ಆದರೆ 1 ನೇ ಆರೋಪಿ ನನ್ನ ಮಗಳನ್ನು ಕನ್ನಗಿರಿಗೆ ಕರೆದುಕೊಂಡು ಹೋಗಿ ಅಲ್ಲಿ ಒಂದು ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿಸಿರುತ್ತಾರೆ. ಕನ್ನಗಿರಿಯ ಹತ್ತಿರವೇ 1 ನೇ ಆರೋಪಿ ತಮ್ಮ ಅತ್ತಿಗೆಗೆ ಮನೆ ಮಾಡಿಕೊಟ್ಟಿದ್ದು, ಅದೇ ಮನೆಯಲ್ಲಿ ಚಾ.ಸಾ.1 ರವರನ್ನು ಇರಿಸಿರುತ್ತಾರೆ. 1 ನೇ ಆರೋಪಿಯ ಅಣ್ಣ ಹೈದರಾಬಾದ್ ನಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಒಂದೆರಡು ತಿಂಗಳಿಗೊಮ್ಮೆ ಬರುತ್ತಿದ್ದರು. 1 ನೇ ಆರೋಪಿ ತಮ್ಮ ಅತ್ತಿಗೆಯೊಂದಿಗೆ ಸದಾಕಾಲ ಮನೆಯಲ್ಲಿ ಇರುತ್ತಿದ್ದರು. ರಾತ್ರಿ 9.00

ಗಂಟೆಗೆ ಚಾ.ಸಾ,1 ರವರು ಕೆಲಸವನ್ನು ಮುಗಿಸಿದ ನಂತರ 1 ನೇ ಆರೋಪಿಯು ಅವರನ್ನು ಕರೆದುಕೊಂಡು ಬರುತ್ತಿರಲಿಲ್ಲ, ಚಾ.ಸಾ.1 ರವರಿಗೆ ಕೆರೆ ಏರಿ ದಾಟಿ ಒಬ್ಬಳೇ ಬರಲು ಹೇಳುತ್ತಿದ್ದರು. ಚಾ.ಸಾ.1 ರವರಿಗೆ ಮನೆಯಲ್ಲಿ ಊಟ ಕೊಡುತ್ತಿರಲಿಲ್ಲ, 1 ನೇ ಆರೋಪಿಯು ಕೆಲಸಕ್ಕೆ ಹೋಗದೇ ಚಾ.ಸಾ,1 ರವರ ಎಟಿಎಂ ಕಾರ್ಡನ್ನು ಕಿತ್ತುಕೊಳ್ಳುತ್ತಿದ್ದರು.

ಒಂದು ದಿನ 1 ನೇ ಆರೋಪಿಯ ಅಣ್ಣ ಊರಿಗೆ ಬಂದು ನೋಡಿದಾಗ 1 ಮತ್ತು 4 ನೇ ಆರೋಪಿತರು ಒಟ್ಟಿಗೆ ಇರುವುದನ್ನು ನೋಡಿ ಅವರಿಬ್ಬರಿಗೆ ಹೊಡೆದಿರುತ್ತಾರೆ. ಆ ಸಂದರ್ಭದಲ್ಲಿ ಚಾ.ಸಾ.1 ರವರು ಆಸ್ಪತ್ರೆಯಲ್ಲಿ ಕೆಲಸಕ್ಕೆ ಹೋಗಿದ್ದರು. ಅವರು ಹಲ್ಲೆ ಮಾಡಿದ ಕಾರಣ 1 ಮತ್ತು 4 ನೇ ಆರೋಪಿತರು ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ. ಈ ವಿಚಾರ ನಮಗೆ ಊರಿನವರಿಂದ ತಿಳಿದು ಗಾಬರಿಯಾಗಿ ನನ್ನ ಮಗಳಿಗೆ ಏನು ಮಾಡುತ್ತಾರೋ ಎಂದು ಹೆದರಿ ನಾವು ಕೂಡಲೇ ಕನ್ನಗಿರಿಗೆ ಹೋಗಿ ಆಸ್ಪತ್ರೆಯಿಂದ ನನ್ನ ಮಗಳನ್ನು ಕರೆದುಕೊಂಡು ಕುಟಗೊಂಡನಹಳ್ಳಿಗೆ ಹೋದೆವು. ನಾವು ಊರಿನಲ್ಲಿ 1 ನೇ ಆರೋಪಿಯ ತಂದೆ ತಾಯಿ ಮತ್ತು ಹಿರಿಯರ ಸಮಕ್ಷಮ ನನ್ನ ಮಗಳನ್ನು ಒಂದೆರಡು ದಿವಸ ಊರಿಗೆ ಕರೆದುಕೊಂಡು ಹೋಗುತ್ತೇವೆ ಎಂದು ಹೇಳಿದಾಗ ಚಾ.ಸಾ,1 ರವರಿಗೆ ಬೆಂಗಳೂರಿನಲ್ಲೇ ಕೆಲಸ ಕೊಡಿಸಲು ಹೇಳಿರುತ್ತಾರೆ ಹಾಗೂ 1 ನೇ ಆರೋಪಿಯನ್ನು ಬೆಂಗಳೂರಿಗೆ ಕಳುಹಿಸುವುದಾಗಿ ಹೇಳಿದರು. ಆದರೆ 1 ನೇ ಆರೋಪಿ ಬೆಂಗಳೂರಿಗೆ ಬಂದಿರುವುದಿಲ್ಲ.

**(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು)**

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಲಾಗಿ ಸಾಕ್ಷಿಯು ಸರಿ ಇದೆ ಎಂದು ಒಪ್ಪಿ ದ್ದಾರೆ.

**10 ನೇ ಎಸಿಎಂಎಂ ನ್ಯಾಯಾಲಯ, ಬೆಂಗಳೂರು**